# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 35/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಮಂಜುನಾಥ | ಫ್ರಾಸಾಃ | 10 |
| **ತಂದೆಯ ಹೆಸರುಃ** | ಶ್ರೀನಿವಾಸರೆಡ್ಡಿ | ಚಾಸಾಃ | 10 |
| **ವಯಸ್ಸುಃ** | 28 | ಪ್ರಮಾಣ ವಚನ ಭೋದಿಸಿದ ದಿನಾಂಕ: | 20-09-2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ವೈಗೊಲ್ಲಹಳ್ಳಿ | | |

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಿಪಿ-*2*ರಲ್ಲಿರುವ ಸಹಿ ನನ್ನದೇ*.* ಅದನ್ನು ನಿಪಿ-*2(*ಡಿ*)* ಎಂದು ಗುರುತಿಸಲಾಯಿತು*.* ದಿ*.27-08-2020* ರಲ್ಲಿ ಆರೋಪಿತರು ಚಾಸಾ-*1* ರವರ ಮೇಲೆ ಹಲ್ಲೆ ಮಾಡಿದ್ದ ಬಾಬ್ತು ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದು*,* ನಿಪಿ-*2* ಮಹಜರ್ ಕ್ರಮ ಜರುಗಿಸಿದ್ದರು*.* ಮಹಜರ್ ಮಾಡುವ ಸಂದರ್ಭದಲ್ಲಿ ಚಾಸಾ-*6* ರವರ ಅಂಗಡಿಯಲ್ಲಿ ಮು*.*ಮಾ*.01* ರಿಂದ ಮು*.*ಮಾ*.04* ಮತ್ತು ಮು*.*ಮಾ*.06,* ಮು*.*ಮಾ*.07* ಇತ್ತು*.* ಪೋಲಿಸರು ಆಯುಧಗಳನ್ನು ಹಾಗೂ ಮಣ್ಣು , ರಕ್ತದ ಮಣ್ಣು ಅಮಾನತ್ತು ಪಡಿಸಿಕೊಂಡರು*.* ಚಾಸಾ-*3,* ಚಾ*.*ಸಾ-*7* ಮತ್ತು ಚಾಸಾ-*09* ಕೂಡ ನನ್ನೊಂದಿಗೆ ಪಂಚನಾಗಿ ಸಹಿ ಮಾಡಿದ್ದಾರೆ*.* ಸಾಕ್ಷಿ ಮು*.*ಮಾ*.01* ರಿಂದ ಮು*.*ಮಾ*.4,* ಮು*.*ಮಾ*.06* ಮತ್ತು ಮು*.*ಮಾ*.7* ನ್ನು ಗುರುತಿಸಿರುತ್ತಾರೆ*.*

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ.ಎಂ.ಎಸ್.ಸಿ ವಕೀಲರಿಂದ ಪಾಟೀ ಸವಾಲು</u>**

ನಾನು 2013 ರಿಂದ ಬಾರ್ ನಲ್ಲಿ ಕೆಲಸ ಮಾಡುತ್ತೇನೆ. ನನಗೆ ಗಾಂಧಿ ಜಯಂತಿಗೆ ಮಾತ್ರ ರಜೆ. ಪ್ರತಿದಿನ ಕೆಲಸ ಮಾಡುತ್ತೇನೆ. ಮಹಜರ್ ಕಾಲದಲ್ಲಿ 5-6 ಜನ ಇದ್ದೇವು. 15 ರಿಂದ 20 ಜನ ಗ್ರಾಮಸ್ಥರು ಇದ್ದರು. ಚಾಸಾ-1 ನನಗೆ ಸಂಬಂಧಿಕನಲ್ಲ. ದೊಣ್ಣೆಗಳು ಎಲ್ಲಾ ಮನೆಗಳ ಬಳಿ ಇರುತ್ತವೆ ಎಂದರೆ ಸರಿ. ಮು.ಮಾಲುಗಳ ಮೇಲೆ ನನ್ನ ಸಹಿ ಪಡೆಯಲಿಲ್ಲ. ಪೇಪರ್ ಮೇಲೆ ಪಡೆದರು. ಪೋಲಿಸ್ ನನಗೆ ನೋಟಿಸ್ ಕೊಟ್ಟಿರಲಿಲ್ಲ. ಮೊದಲಿಗೆ ಚಾಸಾ-3 ಮತ್ತು ಚಾಸಾ-7 ಸಹಿ ಮಾಡಿದ್ದರು. ನಂತರ ನನ್ನ ಸಹಿ ಪಡೆದ್ದರು. ನಿಪಿ-2 ನ್ನು ಓದಿ ಹೇಳಲಿಲ್ಲ. ಸ್ಥಳದಲ್ಲಿಯೇ ಬರೆದುಕೊಂಡು ಹೋಗಿದ್ದರು. ಮು.ಮಾಲುಗಳ ನಾನು ಯಾವುದೇ ಪ್ರತ್ಯೇಕ ಗುರುತುಗಳನ್ನು ನೆನಪಿಟ್ಟುಕೊಂಡಿಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಚಾಸಾ-1 ರವರ ಮಾತು ಕೇಳಿ, ಆರೋಪಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ.01 ರಿಂದ 7 ನ್ನು ನನ್ನ ಮುಂದೆ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**<u>ಉಳಿದ ಆರೋಪಿ ಪರ ವಕೀಲರು ಗೈರು ಹಾಜರು ಹೀಗಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>**

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)                    ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ20.09.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.